ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 5, November-December 2026, Pp. 16-24
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಸರ್ವಜ್ಞನ ದೃಷ್ಟಿಯಲ್ಲಿ ನಮ್ಮ ಸಮಾಜ

ಎಂ. ಕೆ. ಯಾದವ್

ಕನ್ನಡ ಉಪನ್ಯಾಸಕರು, ಬಿ.ಎಲ್.ಡಿ.ಇ. ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ.

Abstract:

ಈ ಲೇಖನವು ಸರ್ವಜ್ಞನ ತ್ರಿಪದಿಗಳಲ್ಲಿ ಪ್ರತಿಬಿಂಬಿತವಾಗಿರುವ ಸಾಮಾಜಿಕ ವ್ಯವಸ್ಥೆ, ಜನಜೀವನ ಹಾಗೂ ಸಮಕಾಲೀನ ಸಮಾಜದ ವಿವಿಧ ಆಯಾಮಗಳನ್ನು ವಿಶ್ಲೇಷಿಸುತ್ತದೆ. ಸರ್ವಜ್ಞನು ತನ್ನ ತ್ರಿಪದಿಗಳ ಮೂಲಕ ಜಾತಿ ವ್ಯವಸ್ಥೆ, ಧಾರ್ಮಿಕ ಡಾಂಭಿಕತೆ, ಸಾಮಾಜಿಕ ಅಸಮಾನತೆ, ದುಶ್ಚಟಗಳು ಮತ್ತು ಮಾನವೀಯ ಮೌಲ್ಯಗಳ ಕುರಿತು ತನ್ನ ವಿಮರ್ಶಾತ್ಮಕ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದಾನೆ. ದಾನಧರ್ಮ, ನೈತಿಕತೆ, ಸತ್ಯನಿಷ್ಠೆ, ಕೃಷಿ ಮತ್ತು ಸಾಮಾಜಿಕ ಸಾಮರಸ್ಯದ ಮಹತ್ವವನ್ನು ಸಾರುವ ಆತನ ವಿಚಾರಗಳು ಸಮಾಜ ಸುಧಾರಣೆಯ ಆಶಯವನ್ನು ಒಳಗೊಂಡಿವೆ. ಸಮಾಜದಲ್ಲಿನ ಅನ್ಯಾಯ, ಮೂಢನಂಬಿಕೆ ಮತ್ತು ಕಪಟ ಆಚರಣೆಗಳನ್ನು ವಿಡಂಬನೆಯ ಮೂಲಕ ಪ್ರಶ್ನಿಸುವ ಸರ್ವಜ್ಞನ ಸಾಹಿತ್ಯವು ಜನರಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಅಧ್ಯಯನವು ಸರ್ವಜ್ಞನ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಪ್ರಜ್ಞೆ, ಮಾನವೀಯ ಚಿಂತನೆ ಮತ್ತು ಸಮಾಜ ಸುಧಾರಣೆಯ ಆಶಯಗಳನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.

Keywords: *ಸರ್ವಜ್ಞ, ತ್ರಿಪದಿ ಸಾಹಿತ್ಯ, ಸಾಮಾಜಿಕ ಪ್ರಜ್ಞೆ, ಜಾತಿ ವ್ಯವಸ್ಥೆ, ಸಮಾಜ ಸುಧಾರಣೆ*

ಪೀಠಿಕೆ

ಭಾರತೀಯ ಭಾಷಾ ಇತಿಹಾಸದಲ್ಲಿ ಕನ್ನಡವು ಪ್ರಾಚೀನ ಭಾಷೆಗಳಲ್ಲಿ ಒಂದಾಗಿದೆ. ಕನ್ನಡ ಸಾಹಿತ್ಯದಲ್ಲಿ ಚಂಪೂ, ಷಟ್ಪದಿ, ಕಂದ, ರಗಳೆ, ವಚನ, ದಾಸ ಸಾಹಿತ್ಯ ಹಾಗೂ ತ್ರಿಪದಿ ಸಾಹಿತ್ಯದಂತಹ ವೈವಿಧ್ಯಮಯ ಸಾಹಿತ್ಯ ಪ್ರಕಾರಗಳನ್ನು ಕಾಣಬಹುದು. ತ್ರಿಪದಿಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಅರ್ಥ ಮತ್ತು ಆಶಯಗಳಲ್ಲಿ ಮಹತ್ವವನ್ನು ಹೊಂದಿವೆ. ತ್ರಿಪದಿ ಸಾಹಿತ್ಯವು ಶಾಸನಗಳಲ್ಲಿ ಕಾಣಿಸಿಕೊಂಡು, ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಕೃತಿಯಲ್ಲಿಯೂ ಅಭಿವ್ಯಕ್ತಿಯಾಗಿದೆ. ಆದರೆ ತ್ರಿಪದಿ ಸಾಹಿತ್ಯವು ತನ್ನ ವೈಶಿಷ್ಟ್ಯಪೂರ್ಣ ಅಭಿವ್ಯಕ್ತಿ ಮತ್ತು ಜನಪ್ರಿಯತೆಯನ್ನು ಸರ್ವಜ್ಞನ ಕಾವ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಪಡೆದುಕೊಂಡಿದೆ.

ತ್ರಿಪದಿಗಳ ಸಾರ್ವಭೌಮನೆಂಬ ಕೀರ್ತಿಗೆ ಪಾತ್ರನಾದ ಸರ್ವಜ್ಞನು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡಿದ್ದಾನೆ. ಈತನು ಇಂದಿನ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮಾಸೂರು ಎಂಬ ಗ್ರಾಮದಲ್ಲಿ ಬಸವರಸ ಮತ್ತು ಕುಂಬಾರ ಮಾಳಿ ಎಂಬ ದಂಪತಿಗಳ ಮಗನಾಗಿ ಜನಿಸಿದನೆಂದು ಹೇಳಲಾಗುತ್ತದೆ. ಈತನ ಮೂಲ ಹೆಸರು ಪುಷ್ಪದತ್ತ

Please cite this article as: ಯಾದವ್, ಎಂ. ಕೆ. (2026). ಸರ್ವಜ್ಞನ ದೃಷ್ಟಿಯಲ್ಲಿ ನಮ್ಮ ಸಮಾಜ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(5), 16–24

ಎಂದು ಕೆಲವು ಪರಂಪರೆಗಳಲ್ಲಿ ಉಲ್ಲೇಖಿಸಲಾಗಿದೆ. ತಂದೆಯು ಬ್ರಾಹ್ಮಣ ಸಮುದಾಯಕ್ಕೆ ಸೇರಿದವನಾಗಿದ್ದರೆ, ತಾಯಿಯು ಕುಂಬಾರ ಸಮುದಾಯಕ್ಕೆ ಸಂಬಂಧಿಸಿದವಳಾಗಿದ್ದಳು.

ಸರ್ವಜ್ಞನ ಜನನದ ಕುರಿತು ಒಂದು ದಂತಕತೆ ಇದೆ. ಬಸವರಸನ ಮಡದಿ ಮಲ್ಲವ್ವಳು ಪುತ್ರ ಭಿಕ್ಷೆಯನ್ನು ವ್ಯಕ್ತಪಡಿಸಿದಾಗ ಬಸವರಸನು ಕಾಶಿಗೆ ಹೋಗಿ ಕಾಶಿ ವಿಶ್ವನಾಥನಲ್ಲಿ ಗಂಡು ಮಗುವಿನ ಸಂತಾನಕ್ಕಾಗಿ ಬೇಡಿಕೊಂಡು ಹಿಂತಿರುಗುತ್ತಿರುವಾಗ ಮಾಸೂರು ಎಂಬ ಗ್ರಾಮಕ್ಕೆ ಬರುತ್ತಾನೆ. ಹಸಿವನ್ನು ಹಿಂಗಿಸಿಕೊಳ್ಳುವುದಕ್ಕಾಗಿ ಅಡುಗೆ ಮಾಡಲು ಮಡಿಕೆಯ ಅವಶ್ಯಕತೆಯಿದ್ದು, ಅಲ್ಲಿಯೇ ಮಡಿಕೆ ಮಾಡುತ್ತಿದ್ದ ಕುಂಬಾರ ಸ್ತ್ರೀ ಮಾಳಿಯಲ್ಲಿಗೆ ಬರುತ್ತಾನೆ. ಆಗ ಮಡಿಕೆಯೊಂದನ್ನು ಕೊಂಡು ಅಲ್ಲಿಯೇ ಇದ್ದ ಒಂದು ಬಾವಿ ಹತ್ತಿರ ಅಡುಗೆಗೆ ಸಿದ್ಧಪಡಿಸುತ್ತಿರುವಾಗ ಜೋರಾಗಿ ಮಳೆ ಬಂದು ತೋಯಿಸಿಕೊಂಡು ಆಶ್ರಯವನ್ನು ಹುಡುಕುತ್ತಾ ಬರುತ್ತಿರುವಾಗ ಕುಂಬಾರ ವಿಧವೆ ಮಾಳಿಯ ಪರಿಚಯವಾಗಿ ಅವಳ ಮನೆಗೆ ಹೋಗುತ್ತಾನೆ. ಮಾಳಿಯು ಅವನಿಗೆ ಅತ್ಯಂತ ಗೌರವದಿಂದ ಉಪಚಾರ ಮಾಡಿದಳು. ಇಬ್ಬರ ನಡುವೆ ಸಂಬಂಧ ಬೆಸೆದು ಅವರಿಬ್ಬರೂ ಅನುರಕ್ತರಾಗುತ್ತಾರೆ. ಇವರಿಬ್ಬರ ಕೂಡಿಕೆಯ ಪರಿಣಾಮವಾಗಿ ಜನಿಸಿದವನೇ ಈ ಸರ್ವಜ್ಞ ಕವಿ ಎಂದು ರೆವರೆಂಡ್ ಉತ್ತಂಗಿ ಚನ್ನಪ್ಪನವರು ಹೇಳಿದ್ದಾರೆ. ಅವರೇ ಮುಂದುವರೆದು ಈ ಕಥೆಯು ಜಾತಿಯ ಅಭಿಮಾನಕ್ಕಾಗಿ ಹುಟ್ಟಿದ ಕಥೆ ಎಂದು ಹೇಳುತ್ತಾರೆ.

ಸರ್ವಜ್ಞನ ಸಾಮಾಜಿಕ ಪ್ರಜ್ಞೆ

ಪ್ರಾಚೀನ ಸಮಾಜದಿಂದ ಇಂದಿನ ಆಧುನಿಕ ಸಮಾಜದವರೆಗೆ ಸಾಮಾಜಿಕ ವ್ಯವಸ್ಥೆ ಮತ್ತು ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅನೇಕ ಸಾಮಾಜಿಕ ಸ್ತರಗಳು ಹಾಗೂ ಅಸಮಾನತೆಗಳು ಕಂಡುಬರುತ್ತವೆ. ಸಮಾಜವು ಒಂದು ರೀತಿಯಲ್ಲಿ ಜೇಡರ ಬಲೆಯಂತೆ ವಿವಿಧ ಸಂಬಂಧಗಳು ಮತ್ತು ವ್ಯವಸ್ಥೆಗಳಿಂದ ಕೂಡಿದೆ. ಸರ್ವಜ್ಞನು ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದ ಕವಿಯಾಗಿದ್ದಾನೆ. ತಾನು ಜೀವಿಸಿದ್ದ ಕಾಲದಲ್ಲಿ ಕಂಡ ಸಾಮಾಜಿಕ ಚಿತ್ರಣವನ್ನು ತನ್ನ ತ್ರಿಪದಿಗಳ ಮೂಲಕ ದಾಖಲಿಸಿದ್ದಾನೆ. ಸಾಮಾಜಿಕ ಲೋಪದೋಷಗಳನ್ನು ವಿಮರ್ಶಿಸುವ ಮತ್ತು ವಿಡಂಬಿಸುವ ಮೂಲಕ ಅಂದಿನ ಸಮಾಜದ ಸ್ಥಿತಿಗತಿಗಳನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತಾನೆ.

ಚನ್ನವೀರ ಕಣವಿಯವರ ಅಭಿಪ್ರಾಯದಂತೆ, ಸರ್ವಜ್ಞನ ಸಾಮಾಜಿಕ ಪ್ರಜ್ಞೆ ಅದ್ಭುತವಾದದ್ದು. ಸಮಾಜದಲ್ಲಿನ ವ್ಯಕ್ತಿಗಳ ಲೋಪದೋಷಗಳು, ಲೌಕಿಕ ಜೀವನದ ಅಸಂಬದ್ಧತೆಗಳು ಹಾಗೂ ಅನ್ಯಾಯಗಳನ್ನು ಆತ ಕಟುವಾಗಿ ಖಂಡಿಸಿದ್ದಾನೆ. ಆತನ ವಿಮರ್ಶೆಯ ಹಿಂದೆ ಸಮಾಜದ ಕುರಿತು ಆಳವಾದ ಅಂತಃಕರಣ ಮತ್ತು ಮಾನವೀಯ ಕಾಳಜಿ ಅಡಗಿದೆ. ಸಮಾಜದಲ್ಲಿನ ಅನ್ಯಾಯ, ಅನಾಚಾರಗಳಿಂದ ಜನರು ದೂರವಿದ್ದು, ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕೆಂಬ ಆಶಯದಿಂದ ತನ್ನ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ತ್ರಿಪದಿಗಳಲ್ಲಿ ದಾಖಲಿಸಿದ್ದಾನೆ. ಈ ಕಾರಣದಿಂದ ಸರ್ವಜ್ಞನ ಸಾಮಾಜಿಕ ಚಿಂತನೆಗಳು ಅತ್ಯಂತ ಮೌಲ್ಯಯುತವಾಗಿವೆ.

ಧಾರ್ಮಿಕ ಡಾಂಭಿಕತೆ ಮತ್ತು ಸಾಮಾಜಿಕ ಆಚರಣೆಗಳು

ಸರ್ವಜ್ಞನು ಜನಿಸಿ ಬೆಳೆದ ಪ್ರದೇಶವು ಬನವಾಸಿ ನಾಡಿನ ವ್ಯಾಪ್ತಿಗೆ ಸೇರಿದ್ದು. ಈ ಪ್ರದೇಶದಲ್ಲಿ ಕದಂಬರ ಕಾಲದಿಂದಲೂ ವೈದಿಕ ಸಂಪ್ರದಾಯಗಳ ಪ್ರಭಾವವಿತ್ತು. ಹನ್ನೆರಡನೆಯ ಶತಮಾನದ ನಂತರ ಶಿವಶರಣರ ಆಗಮನದಿಂದ ಶರಣ ಧರ್ಮವು ಅಸ್ತಿತ್ವಕ್ಕೆ ಬಂದಿತು. ಶರಣ ಚಳವಳಿಯ ನಂತರವೂ ವೈದಿಕ ಸಂಪ್ರದಾಯಗಳ ಪ್ರಭಾವ ಮುಂದುವರಿದಿರುವುದನ್ನು ಕೆಲವು ಶಾಸನಗಳು ಸೂಚಿಸುತ್ತವೆ.

ಸಮಾಜದಲ್ಲಿ ವಿವಿಧ ಧರ್ಮಗಳು ಮತ್ತು ಜಾತಿಗಳು ಅಸ್ತಿತ್ವದಲ್ಲಿದ್ದ ಕಾರಣ ಧಾರ್ಮಿಕ ಆಚರಣೆಗಳು ಹಾಗೂ ಜಾತಿ ಸಂಬಂಧಿತ ಸಂಘರ್ಷಗಳು ಆಗಾಗ ನಡೆಯುತ್ತಿದ್ದವು. ಇಂತಹ ಸಾಮಾಜಿಕ ಪರಿಸ್ಥಿತಿಗಳನ್ನು ಸರ್ವಜ್ಞನು ಗಮನಿಸಿದ್ದಾನೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕತೆ, ಅಂಧ ಆಚರಣೆಗಳು ಮತ್ತು ಕಪಟ ಭಕ್ತಿಯನ್ನು ತನ್ನ ತ್ರಿಪದಿಗಳ ಮೂಲಕ ವಿಮರ್ಶಿಸಿದ್ದಾನೆ. ವೈದಿಕ ಮತ್ತು ಶರಣ ಧಾರ್ಮಿಕ ಆಚರಣೆಗಳ ಕುರಿತು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದರಿಂದ, ಅಂದಿನ ಸಮಾಜದಲ್ಲಿ ವಿವಿಧ ಧಾರ್ಮಿಕ ಪಂಥಗಳ ಪ್ರಭಾವವಿದ್ದುದನ್ನು ಗುರುತಿಸಬಹುದು. ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ಡಾಂಭಿಕತೆ ತೋರುವವರನ್ನು ಸರ್ವಜ್ಞನು ಕಟುವಾಗಿ ವಿಡಂಬಿಸಿದ್ದಾನೆ.

ನಿಷ್ಠೆಯಿದ್ದಲ್ಲಿ ಶಿವನು ಅಂತರಂಗದಲ್ಲಿ ನೆಲೆಸಿರುತ್ತಾನೆ; ನಿಷ್ಠೆಯಿಲ್ಲದೆ ಮಾಡುವ ಪೂಜೆ ಮತ್ತು ಭಜನೆಗಳಿಗೆ ಅರ್ಥವಿಲ್ಲ ಎಂಬ ಆಶಯವನ್ನು ಸರ್ವಜ್ಞನು ವ್ಯಕ್ತಪಡಿಸುತ್ತಾನೆ.

ನಿಷ್ಠೆ ಇದ್ದಡೆ ಶಿವನು ಗಟ್ಟಿಗೊಂಡೊಳಗಿಪ್ಪ
ನಿಷ್ಠೆ ಇಲ್ಲದಲೆ ಭಜಿಸಿದರೆ ಶಿವನವನ
ಬಿಟ್ಟು ಬಯಲಪ್ಪ ಸರ್ವಜ್ಞ,
ಅಷ್ಟವಿಧದರ್ಚನೆಯ ಎಷ್ಟು ಮಾಡಿದರೇನು
ನಿಷ್ಠೆ ನೆಲೆಗೊಳ್ಳದೆ ಭಜಿಸುವ ಪೂಜೆಯದು
ನಷ್ಟ ಕಾಣಯ್ಯ ಸರ್ವಜ್ಞ,

ಭಕ್ತಿಯು ಬಾಹ್ಯ ಆಚರಣೆಗಳಲ್ಲಿ ಮಾತ್ರವಲ್ಲದೆ, ಅಂತರಂಗದ ನಿಷ್ಠೆ ಮತ್ತು ಶುದ್ಧತೆಯಲ್ಲಿ ನೆಲೆಗೊಂಡಿರಬೇಕು ಎಂಬುದನ್ನು ಈ ತ್ರಿಪದಿಗಳು ಸಾರುತ್ತವೆ.

ದೇಹ ದೇವಾಲಯವು ಜೀವನ ಶಿವಲಿಂಗ
ಭಯಂಗಳಳಿದು ಭಜಿಪಂಗೆ ಮುಕ್ತಿ ಸಂ
ದೇಹವಿಲ್ಲ ಸರ್ವಜ್ಞ,

ಈ ತ್ರಿಪದಿಯಲ್ಲಿ ಮಾನವ ದೇಹವನ್ನೇ ದೇವಾಲಯವೆಂದು ಪರಿಗಣಿಸಿ, ಅಂತರಂಗದ ಭಕ್ತಿ ಮತ್ತು ಆತ್ಮಶುದ್ಧಿಗೆ ಮಹತ್ವ ನೀಡಲಾಗಿದೆ.

ಬ್ರಹ್ಮನಾಳದ ಗೊತ್ತು ಒಮ್ಮಲೇ ದೊರೆಯುವುದೇ
ಹಮ್ಮಿನ ಹೊಗೆಯು ತುಂಬಿರ್ದ ಶಿವಯೋಗಿ
ಬೊಮ್ಮನಾಗುವವನೇ ಸರ್ವಜ್ಞ,

ಈ ತ್ರಿಪದಿಯ ಮೂಲಕ ಅಹಂಕಾರ ಮತ್ತು ಆಂತರಿಕ ಶುದ್ಧತೆಯ ಕುರಿತು ಚಿಂತನೆ ವ್ಯಕ್ತವಾಗುತ್ತದೆ.

ಕೊಲುವ ಧರ್ಮನೊಯ್ದು ಒಲೆಯೊಳಗಿಕ್ಕು
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ,

ಈ ತ್ರಿಪದಿಯಲ್ಲಿ ಧಾರ್ಮಿಕ ನಂಬಿಕೆಗಳು, ಆಚರಣೆಗಳು ಮತ್ತು ಅವುಗಳ ಕುರಿತು ಕವಿಯ ಅಭಿಪ್ರಾಯ ವ್ಯಕ್ತವಾಗುತ್ತದೆ.

ಸತ್ಯರ ನುಡಿ ತೀರ್ಥ ನಿತ್ಯರ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ
ರೆತ್ತನದು ತೀರ್ಥ ಸರ್ವಜ್ಞ,
ಎತ್ತು ಗಾನವ ಹೊತ್ತು ಸುತ್ತಿ ಬಂದರೇನು
ಚಿತ್ತದಲಿ ಶಿವನ ನೆನೆಯದೊಡೆ ದೇಗುಲವ
ಸುತ್ತಿ ಫಲವೇನು ಸರ್ವಜ್ಞ,

ಈ ತ್ರಿಪದಿಗಳ ಮೂಲಕ ಸರ್ವಜ್ಞನು ನಿಜವಾದ ಧಾರ್ಮಿಕತೆ ಎಂದರೆ ಸತ್ಯ, ಉತ್ತಮ ನಡತೆ, ಸಜ್ಜನರ ಸಂಗ ಮತ್ತು ಅಂತರಂಗದ ಭಕ್ತಿ ಎಂಬುದನ್ನು ಸಾರುತ್ತಾನೆ. ಧಾರ್ಮಿಕ ಆಚರಣೆಗಳನ್ನು ಕೇವಲ ಬಾಹ್ಯ ಪ್ರದರ್ಶನಕ್ಕೆ ಸೀಮಿತಗೊಳಿಸದೆ, ಅವುಗಳ ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸೂಚಿಸುತ್ತಾನೆ.

ಹೀಗೆ ಅಂದಿನ ಸಮಾಜದಲ್ಲಿ ಧರ್ಮ ಮತ್ತು ಧಾರ್ಮಿಕತೆಯ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕ

ಭಕ್ತಿ, ಅನಾಚಾರ ಮತ್ತು ಕಂದಾಚಾರಗಳನ್ನು ಆಚರಿಸುವ ಗುಂಪುಗಳು ಇದ್ದವು ಎಂಬುದನ್ನು ಸರ್ವಜ್ಞನ ತ್ರಿಪದಿಗಳು ಸೂಚಿಸುತ್ತವೆ. ಇಂತಹ ಅನೇಕ ತ್ರಿಪದಿಗಳ ಮೂಲಕ ಧಾರ್ಮಿಕ ಕಂದಾಚಾರಗಳಿಂದ ಸಮಾಜವನ್ನು ಹೊರತರುವ ಪ್ರಯತ್ನವನ್ನು ಸರ್ವಜ್ಞನು ಮಾಡಿದ್ದಾನೆ. ಜನರು ತಮ್ಮ ಧಾರ್ಮಿಕ ನಂಬಿಕೆಗಳನ್ನು ಉಳಿಸಿಕೊಂಡು, ದೇವರೊಂದಿಗೆ ನೇರವಾದ ಮತ್ತು ನಿಷ್ಠೆಯುತ ಸಂಬಂಧವನ್ನು ಹೊಂದಲು ಪ್ರೇರೇಪಿಸಿದ ಶ್ರೇಷ್ಠ ವಚನಕಾರನಾಗಿ ಸರ್ವಜ್ಞನನ್ನು ಗುರುತಿಸಬಹುದು.

ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆ

ಸರ್ವಜ್ಞನು ತನ್ನ ಕಾಲದ ಸಮಾಜದಲ್ಲಿ ಕಂಡ ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ ಜಾತಿ ವ್ಯವಸ್ಥೆ. ಜಾತಿ ವ್ಯವಸ್ಥೆಯು ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಅಸಮಾನತೆಯ ಒಂದು ರೂಪವಾಗಿದೆ. ಜಗಜ್ಯೋತಿ ಬಸವೇಶ್ವರರು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಿ ಸಮಾನತೆಯ ಸಮಾಜವನ್ನು ನಿರ್ಮಿಸಲು ಮಾಡಿದ ಪ್ರಯತ್ನಗಳು ಅತ್ಯಂತ ಮಹತ್ವದ್ದಾಗಿವೆ. ಆದಾಗ್ಯೂ, ಜಾತಿ ವ್ಯವಸ್ಥೆಯು ವಿವಿಧ ರೂಪಗಳಲ್ಲಿ ಮುಂದುವರಿದಿರುವುದನ್ನು ಕಾಣಬಹುದು.

ಸರ್ವಜ್ಞನ ಕಾಲದಲ್ಲಿಯೂ ಜಾತೀಯತೆ ಪ್ರಬಲವಾಗಿತ್ತು ಎಂಬುದಕ್ಕೆ ಆತನ ತ್ರಿಪದಿಗಳು ಸಾಕ್ಷಿಯಾಗಿವೆ. ಸಮಾಜದಲ್ಲಿದ್ದ ವರ್ಣವ್ಯವಸ್ಥೆಯು ಕ್ರಮೇಣ ಜಾತಿ ವ್ಯವಸ್ಥೆಯಾಗಿ ರೂಪುಗೊಂಡು, ಸಾಮಾಜಿಕ ಅಸಮಾನತೆಗಳಿಗೆ ಕಾರಣವಾಗಿತ್ತು. ಮೇಲ್ವರ್ಗದವರು ಸಂಪ್ರದಾಯಗಳ ಹೆಸರಿನಲ್ಲಿ ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದಿದ್ದರು. ಸಮಾಜದಲ್ಲಿ ಹೊಲೆಯ, ಮಾದಿಗ ಮುಂತಾದ ಸಮುದಾಯಗಳ ಜನರನ್ನು ಕಡೆಗಣಿಸಿ, ಅವರ ಬಗ್ಗೆ ಅಸಡ್ಡೆ ತೋರುತ್ತಿದ್ದ ಪರಿಸ್ಥಿತಿಯೂ ಅಸ್ತಿತ್ವದಲ್ಲಿತ್ತು. ಇಂತಹ ಸಾಮಾಜಿಕ ಚಿತ್ರಣವನ್ನು ಸರ್ವಜ್ಞನು ಹತ್ತಿರದಿಂದ ಕಂಡಿದ್ದಾನೆ. ಜಾತಿ ವ್ಯವಸ್ಥೆಯ ವಿರುದ್ಧ ತನ್ನ ತ್ರಿಪದಿಗಳ ಮೂಲಕ ಮಾನವೀಯ ಮತ್ತು ಸಮಾನತೆಯ ಸಂದೇಶವನ್ನು ಸಾರಿದ್ದಾನೆ.

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿ ಎನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ
ನಡೆಯುವುದೊಂದೆ ಭೂಮಿ
ಕುಡಿಯುವುದೊಂದೆ ನೀರು
ಸುಡುವ ಅಗ್ನಿ ಒಂದೇ ಇರುತಿರಲು ಕುಲಗೋತ್ರ
ನಡುವೆ ಎತ್ತಿದೆ ಸರ್ವಜ್ಞ
ಉತ್ತಮನಾದ ವರ್ಣಿಗಳ ಉತ್ತಮರು ಎನಬೇಡ
ಮತ್ತೆ ತನ್ನಂತೆ ಬಗೆದವರನೆಲ್ಲರನು
ಉತ್ತಮರು ಎನ್ನ ಸರ್ವಜ್ಞ
ಜಾತಿ ಜಾತಿಗೆ ವೈರ ನೀತಿ ಮೂರ್ಖಂಗೆ ವೈರ
ಪಾತಕವು ವೈರ ಸುಜನರಿಗೆ ಅರಿತವಂಗೆ
ಏತರದ ವೈರ ಸರ್ವಜ್ಞ

ಈ ತ್ರಿಪದಿಗಳ ಮೂಲಕ ಸರ್ವಜ್ಞನು ಜಾತಿ ಆಧಾರಿತ ಮೇಲು–ಕೀಳು ಭಾವನೆಗಳನ್ನು ತಿರಸ್ಕರಿಸಿ, ಮನುಷ್ಯರೆಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರುತ್ತಾನೆ. ಜಾತಿಯ ಆಧಾರದ ಮೇಲೆ ವ್ಯಕ್ತಿಯನ್ನು ಅಳೆಯಬಾರದು; ಮಾನವೀಯತೆ, ನೈತಿಕತೆ ಮತ್ತು ಉತ್ತಮ ನಡತೆಯೇ ವ್ಯಕ್ತಿಯ ನಿಜವಾದ ಮೌಲ್ಯವನ್ನು ನಿರ್ಧರಿಸಬೇಕು ಎಂಬುದು ಆತನ ಆಶಯವಾಗಿದೆ.

ಹೀಗೆ ಹಲವಾರು ತ್ರಿಪದಿಗಳ ಮೂಲಕ ಸರ್ವಜ್ಞನು ತನ್ನ ಕಾಲದಲ್ಲಿದ್ದ ಜಾತಿ ವ್ಯವಸ್ಥೆಯ ಕುರಿತು ತಿಳಿಸಿಕೊಟ್ಟಿದ್ದಾನೆ. ಹೊಲೆಯ, ಮಾದಿಗ ಮುಂತಾದ ಸಮುದಾಯಗಳ ಹೆಸರುಗಳು ಆತನ ತ್ರಿಪದಿಗಳಲ್ಲಿ ಕಂಡುಬರುತ್ತವೆ. ಸಮಾಜದಲ್ಲಿ ಈ ಸಮುದಾಯಗಳ ಜನರು ಮೇಲ್ವರ್ಗದವರಿಂದ ಅವಮಾನ ಮತ್ತು ತಾರತಮ್ಯಕ್ಕೆ ಒಳಗಾಗುತ್ತಿದ್ದ ಪರಿಸ್ಥಿತಿಯನ್ನು ಕವಿ ಗುರುತಿಸಿದ್ದಾನೆ.

ಸರ್ವಜ್ಞನಿಗಿಂತ ಮುಂಚೆಯೇ ಜಗಜ್ಯೋತಿ ಬಸವೇಶ್ವರರು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಿ

ಸಮಾನತೆಯ ಸಮಾಜವನ್ನು ನಿರ್ಮಿಸಲು ಅನೇಕ ಪ್ರಯತ್ನಗಳನ್ನು ಮಾಡಿದ್ದರು. ಅನುಭವ ಮಂಟಪವನ್ನು ಸ್ಥಾಪಿಸಿ, ಸ್ತ್ರೀ–ಪುರುಷ, ಮೇಲು–ಕೀಳು, ಬಡವ–ಶ್ರೀಮಂತ ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಿದ್ದರು. ಬಸವಣ್ಣನವರ ವಚನವೊಂದು ಈ ರೀತಿಯ ಸಮಾನತೆಯ ಆಶಯವನ್ನು ವ್ಯಕ್ತಪಡಿಸುತ್ತದೆ:

ಕೊಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ
ಕುಲವೇನೊ ಅವರ ಕುಲವೇನೊ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು.

ಸಮಾಜದಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆಯನ್ನು ಕನಕದಾಸರು ಕೂಡ ತಮ್ಮ ಕೀರ್ತನೆಗಳ ಮೂಲಕ ಟೀಕಿಸಿದ್ದಾರೆ. ಕನಕದಾಸರ ಪ್ರಸಿದ್ಧ ಕೀರ್ತನೆಯೊಂದರಲ್ಲಿ ಜಾತಿ ಆಧಾರಿತ ಭೇದಭಾವವನ್ನು ಪ್ರಶ್ನಿಸಲಾಗಿದೆ.

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೆನಾದರೂ ಬಲ್ಲಿರಾ?
ಹುಟ್ಟಿದ ಯೋನಿಗಳಿಲ್ಲ ಮೆಟ್ಟಿದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೆನು ಕಿರಿದೆನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜಾ.

ಈ ಕೀರ್ತನೆಯ ಮೂಲಕ ಮಾನವರೆಲ್ಲರೂ ಪ್ರಕೃತಿ ಮತ್ತು ಜೀವನದ ಮೂಲಭೂತ ಅಗತ್ಯಗಳಲ್ಲಿ ಸಮಾನರು ಎಂಬ ವಿಚಾರವನ್ನು ವ್ಯಕ್ತಪಡಿಸಲಾಗಿದೆ. ಜಾತಿಯ ಆಧಾರದ ಮೇಲೆ ಮನುಷ್ಯರನ್ನು ವಿಭಜಿಸುವುದು ಅರ್ಥಹೀನವೆಂಬ ಸಂದೇಶವನ್ನು ಸಾರಲಾಗಿದೆ.

ಹೀಗೆ ಸರ್ವಜ್ಞ, ಬಸವಣ್ಣ ಮತ್ತು ಕನಕದಾಸರಂತಹ ಸಮಾಜ ಸುಧಾರಕರು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಿ ಸಮಾನತೆಯ ಸಮಾಜವನ್ನು ಕಟ್ಟಲು ಮಾಡಿದ ಪ್ರಯತ್ನಗಳು ಗಮನಾರ್ಹವಾಗಿವೆ. ಇವರ ಸಾಹಿತ್ಯವು ಸಾಮಾಜಿಕ ನ್ಯಾಯ, ಮಾನವೀಯತೆ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಬೋಧಿಸುತ್ತದೆ.

ಸ್ತ್ರೀ, ಕುಟುಂಬ ಮತ್ತು ನೈತಿಕ ಮೌಲ್ಯಗಳು

ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಮಾನವ ಸಂಬಂಧಗಳು, ಕುಟುಂಬ ಜೀವನ ಮತ್ತು ವ್ಯಕ್ತಿಯ ನೈತಿಕ ಗುಣಗಳ ಕುರಿತು ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ. ಸಮಾಜದಲ್ಲಿನ ಕೆಲವು ವ್ಯಕ್ತಿಗಳ ವರ್ತನೆ, ಸ್ತ್ರೀ ವ್ಯಾಮೋಹ ಮತ್ತು ಅತಿಯಾದ ಆಸೆಗಳನ್ನು ವಿಡಂಬನಾತ್ಮಕವಾಗಿ ವಿಮರ್ಶಿಸಿದ್ದಾನೆ. ಆತನ ತ್ರಿಪದಿಗಳಲ್ಲಿ ಸ್ತ್ರೀಯ ಕುರಿತು ವ್ಯಕ್ತವಾಗಿರುವ ವಿಚಾರಗಳನ್ನು ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ.

ಹೆಣ್ಣಿಂದಲೇ ಇಹವು ಹೆಣ್ಣಿಂದಲೇ ಪರವು
ಹೆಣ್ಣಿಂದಲೇ ಸಕಲ ಸಂಪದವು ಹೆಣ್ಣಿಲ್ಲ
ದಣ್ಣಗಳು ಯಾರು ಸರ್ವಜ್ಞ,

ಈ ತ್ರಿಪದಿಯಲ್ಲಿ ಸ್ತ್ರೀಯು ಕುಟುಂಬ ಮತ್ತು ಜೀವನದಲ್ಲಿ ಹೊಂದಿರುವ ಮಹತ್ವದ ಸ್ಥಾನವನ್ನು ಪ್ರಶ್ನಾತ್ಮಕವಾಗಿ ವ್ಯಕ್ತಪಡಿಸಿರುವುದನ್ನು ಕಾಣಬಹುದು. ಸ್ತ್ರೀ ಸಂಬಂಧಿತ ವಿಚಾರಗಳನ್ನು ಚರ್ಚಿಸುವ ಸಂದರ್ಭದಲ್ಲಿ ಸರ್ವಜ್ಞನ ಕಾಲದ ಸಾಮಾಜಿಕ ಮೌಲ್ಯಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ಪ್ರಭಾವವನ್ನು ಗಮನಿಸಬೇಕಾಗಿದೆ.

ವ್ಯಕ್ತಿತ್ವ, ಆರೋಗ್ಯ ಮತ್ತು ಸಂಯಮ

ಸರ್ವಜ್ಞನು ವ್ಯಕ್ತಿಯ ವ್ಯಕ್ತಿತ್ವ, ಆರೋಗ್ಯ ಮತ್ತು ಜೀವನಶೈಲಿಯ ಕುರಿತು ಕೂಡ ಮಾರ್ಮಿಕವಾದ ಸಲಹೆಗಳನ್ನು ನೀಡಿದ್ದಾನೆ. ಮನಸ್ಸು, ನಾಲಿಗೆ ಮತ್ತು ಇಂದ್ರಿಯಗಳ ಮೇಲೆ ಸಂಯಮವನ್ನು ಹೊಂದುವುದು ಉತ್ತಮ ಜೀವನಕ್ಕೆ ಅಗತ್ಯವೆಂದು ಆತ ತಿಳಿಸುತ್ತಾನೆ.

ಕಚ್ಚೆ ನಾಲಗೆ ಮನವು ಇಚ್ಛೆಯಲಿ ಇದ್ದಿಹರೇ
ನುಚ್ಚು ಮಜ್ಜಿಗೆಯು ಹಿತವಕ್ಕು ಆಯುಷ್ಯ
ಹೆಚ್ಚಾಗಲಿಕ್ಕು ಸರ್ವಜ್ಞ

ಈ ತ್ರಿಪದಿಯ ಮೂಲಕ ವ್ಯಕ್ತಿಯ ಆಹಾರ ಪದ್ಧತಿ, ಮನಸ್ಸಿನ ನಿಯಂತ್ರಣ ಮತ್ತು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ಸೂಚಿಸುತ್ತಾನೆ. ಉತ್ತಮ ಆಹಾರ ಮತ್ತು ಸಂಯಮಿತ ಜೀವನವು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಸಹಾಯಕವಾಗುತ್ತದೆ ಎಂಬ ಸಂದೇಶವನ್ನು ಇಲ್ಲಿ ಕಾಣಬಹುದು.

ದಾನಧರ್ಮ ಮತ್ತು ಸಂಪತ್ತಿನ ಸದ್ಬಳಕೆ

ಸರ್ವಜ್ಞನ ದೃಷ್ಟಿಯಲ್ಲಿ ದಾನವು ಮಹತ್ವದ ಸಾಮಾಜಿಕ ಮತ್ತು ನೈತಿಕ ಮೌಲ್ಯವಾಗಿದೆ. ದಾನ ಮಾಡುವವರು, ದಾನ ಮಾಡದೆ ಸಂಪತ್ತನ್ನು ಸಂಗ್ರಹಿಸುವವರು ಹಾಗೂ ಕಪಟ ಉದ್ದೇಶದಿಂದ ದಾನ ಮಾಡುವವರು ಇಂತಹ ವಿಭಿನ್ನ ವ್ಯಕ್ತಿಗಳನ್ನು ಆತ ತನ್ನ ತ್ರಿಪದಿಗಳಲ್ಲಿ ಚಿತ್ರಿಸಿದ್ದಾನೆ. ಸಮಾಜದಲ್ಲಿ ನಿಷ್ಕಲ್ಮಷ ಮನಸ್ಸಿನಿಂದ ದಾನ ಮಾಡುವವರಿದ್ದಂತೆ, ಸ್ವಾರ್ಥದಿಂದ ಸಂಪತ್ತನ್ನು ಬಚ್ಚಿಡುವವರೂ ಇದ್ದರು ಎಂಬುದನ್ನು ಆತನ ವಿಚಾರಗಳು ಸೂಚಿಸುತ್ತವೆ.

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದೆ
ಕಟ್ಟಿಹುದು ಉತ್ತಿ ಸರ್ವಜ್ಞ

ಈ ತ್ರಿಪದಿಯು ದಾನ ಮಾಡುವುದರಿಂದ ಉಂಟಾಗುವ ಒಳಿತನ್ನು ಸೂಚಿಸುತ್ತದೆ. ಸಂಪತ್ತನ್ನು ಕೇವಲ ಸ್ವಂತಕ್ಕಾಗಿ ಸಂಗ್ರಹಿಸುವುದಕ್ಕಿಂತ, ಅಗತ್ಯವಿರುವವರಿಗೆ ನೆರವಾಗುವುದರಲ್ಲಿ ನಿಜವಾದ ಮೌಲ್ಯವಿದೆ ಎಂಬ ಸಂದೇಶವನ್ನು ಸಾರುತ್ತದೆ.

ಸಿರಿಯ ಸಂಸಾರವನ್ನು ಸ್ಥಿರವೆಂದು ನಂಬದಿರು
ಹಿರಿದೊಂದು ಸಂತೆ ನೆರೆದೊಂದು ಜಾವಕ್ಕೆ
ಹರಿದು ಹೋದಂತೆ ಸರ್ವಜ್ಞ

ಈ ತ್ರಿಪದಿಯ ಮೂಲಕ ಜೀವನ ಮತ್ತು ಸಂಪತ್ತು ಶಾಶ್ವತವಲ್ಲ ಎಂಬುದನ್ನು ಕವಿ ನೆನಪಿಸುತ್ತಾನೆ. ಮಾನವನು ಸಂಪತ್ತಿನ ಬಗ್ಗೆ ಅತಿಯಾದ ಮೋಹ ಹೊಂದದೆ, ಜೀವನದ ಅನಿಶ್ಚಿತತೆಯನ್ನು ಅರಿತುಕೊಳ್ಳಬೇಕು ಎಂಬ ಆಶಯ ವ್ಯಕ್ತವಾಗುತ್ತದೆ.

ಅನ್ನವನು ಇಕ್ಕುವುದು, ನಿನ್ನಿಯನು ನುಡಿಯುವುದು
ತನಂತೆ ಪರರ ಬಗೆದೊಡೆ ಕೈಲಾಸ
ಭಿನ್ನಣವಕ್ಕು ಸರ್ವಜ್ಞ

ಈ ತ್ರಿಪದಿಯು ಅನ್ನದಾನ, ಸೌಜನ್ಯ ಮತ್ತು ಇತರರನ್ನು ತನ್ನಂತೆಯೇ ಗೌರವಿಸುವ ಮನೋಭಾವದ ಮಹತ್ವವನ್ನು ಸಾರುತ್ತದೆ.

ಆಗ ಬಾ! ಈಗ ಬಾ! ಹೋಗಿ ಬಾ! ಎನ್ನದಲೆ
ಆಗಲೇ ಕರೆದು ಕೊಡುವವನ ಧರ್ಮ
ಹೊನ್ನಾಗದೆ ಬಿಡದು ಸರ್ವಜ್ಞ

ಇಲ್ಲಿ ಅಗತ್ಯವಿರುವವರಿಗೆ ವಿಳಂಬ ಮಾಡದೆ ಸಹಾಯ ಮಾಡುವ ಗುಣವನ್ನು ಕವಿ ಮೆಚ್ಚುತ್ತಾನೆ. ದಾನವು ಕೇವಲ ಮಾತಿನಲ್ಲಿ ಉಳಿಯದೆ, ಸಮಯಕ್ಕೆ ಸರಿಯಾಗಿ ಕಾರ್ಯರೂಪಕ್ಕೆ ಬರಬೇಕು ಎಂಬುದನ್ನು ಸೂಚಿಸುತ್ತಾನೆ.

ದಾನವೆಂದರೆ ತಲೆಯಲಿ ಚಾಣದಿ ಕಡಿದಂತೆ
ತಾನೊಂದು ತಪ್ಪು ಮಾಡಿ ನೂರಾರನು
ಮೌನದಿಂದ ಕೂಡುವ ಸರ್ವಜ್ಞ

ಈ ತ್ರಿಪದಿಯು ದಾನ ಮತ್ತು ನೈತಿಕ ಹೊಣೆಗಾರಿಕೆಯ ಕುರಿತು ಚಿಂತನೆಗೆ ಅವಕಾಶ ನೀಡುತ್ತದೆ. ದಾನವನ್ನು ಕೇವಲ ಪಾಪ ಪರಿಹಾರದ ಸಾಧನವಾಗಿ ಪರಿಗಣಿಸದೆ, ನೈತಿಕ ಜೀವನದ ಭಾಗವಾಗಿ ಅರ್ಥೈಸಿಕೊಳ್ಳಬೇಕು ಎಂಬ ಆಶಯವನ್ನು ಇಲ್ಲಿ ಕಾಣಬಹುದು.

ದಾನಧರ್ಮದ ಕುರಿತು ಸರ್ವಜ್ಞನು ವಿವಿಧ ರೀತಿಯ ವ್ಯಕ್ತಿಗಳ ವರ್ತನೆಯನ್ನು ಚಿತ್ರಿಸುವ ಮೂಲಕ ಸಮಾಜದಲ್ಲಿ ಸಂಪತ್ತಿನ ಸದ್ಬಳಕೆ, ಮಾನವೀಯತೆ ಮತ್ತು ಪರೋಪಕಾರದ ಮಹತ್ವವನ್ನು ತಿಳಿಸಿದ್ದಾನೆ. ಅತಿಯಾದ ಸಂಪತ್ತನ್ನು

ಸಂಗ್ರಹಿಸುವುದಕ್ಕಿಂತ, ಅದನ್ನು ಸಮಾಜದ ಒಳಿತಿಗಾಗಿ ಬಳಸುವುದು ಉತ್ತಮ ಎಂಬ ವಿಚಾರವನ್ನು ಆತ ಸಾರುತ್ತಾನೆ.

ಉಣ್ಣ ದೊಡವೆಯ ಗಳಿಸಿ ಮಣ್ಣಲ್ಲಿ ಮುಚ್ಚಿಟ್ಟು
ಚೆನ್ನಾಗಿ ನೆಲವ ಸಾರಿಸುವವನ ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ

ಈ ತ್ರಿಪದಿಯಲ್ಲಿ ಸಂಪತ್ತನ್ನು ದುಡಿಯದೆ ಅಥವಾ ಸಮಾಜದ ಒಳಿತಿಗೆ ಬಳಸದೆ ಮಣ್ಣಿನಲ್ಲಿ ಮುಚ್ಚಿಡುವ ಜಿಪುಣತನವನ್ನು ಕವಿ ವಿಡಂಬಿಸಿದ್ದಾನೆ. ಸಂಪತ್ತಿನ ಅತಿಯಾದ ಸಂಗ್ರಹವು ಅಂತಿಮವಾಗಿ ನಿಷ್ಫಯೋಜಕವಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡುತ್ತಾನೆ.

ಸತ್ಯ, ಪ್ರಾಮಾಣಿಕತೆ ಮತ್ತು ಸಾಮಾಜಿಕ ನಡವಳಿಕೆ

ಸರ್ವಜ್ಞನ ಕಾಲದ ಸಮಾಜದಲ್ಲಿ ಕಳ್ಳತನ, ಸುಳ್ಳು ಹೇಳುವುದು ಮತ್ತು ಮೋಸ ಮಾಡುವಂತಹ ನಡವಳಿಕೆಗಳು ಇದ್ದವು ಎಂಬುದನ್ನು ಆತನ ತ್ರಿಪದಿಗಳು ಸೂಚಿಸುತ್ತವೆ. ಇಂತಹ ದುಷ್ಟ ಗುಣಗಳು ವ್ಯಕ್ತಿಯ ಬದುಕನ್ನು ಹಾಳುಮಾಡುವುದಲ್ಲದೆ, ಸಮಾಜದ ನೈತಿಕ ವ್ಯವಸ್ಥೆಯ ಮೇಲೆಯೂ ಕೆಟ್ಟ ಪರಿಣಾಮ ಬೀರುತ್ತವೆ. ಆದ್ದರಿಂದ ಸರ್ವಜ್ಞನು ಸತ್ಯ, ಪ್ರಾಮಾಣಿಕತೆ ಮತ್ತು ಉತ್ತಮ ನಡತೆಗೆ ಮಹತ್ವ ನೀಡಿದ್ದಾನೆ.

ಒಳ್ಳೆಯವನು ಇರದೂರ ಕಳ್ಳನೊಡನಾಟವು
ಸುಳ್ಳಿನ ಮಾತು ಈ ಮೂರು ಕೆಸರೊಳಗೆ
ಮುಳ್ಳು ತುಳಿದಂತೆ ಸರ್ವಜ್ಞ

ಈ ತ್ರಿಪದಿಯಲ್ಲಿ ಒಳ್ಳೆಯ ವ್ಯಕ್ತಿಗಳಿಲ್ಲದ ಸ್ಥಳದಲ್ಲಿ ವಾಸಿಸುವುದು, ಕಳ್ಳರೊಂದಿಗೆ ಸ್ನೇಹ ಬೆಳೆಸುವುದು ಮತ್ತು ಸುಳ್ಳು ಹೇಳುವುದು ಅಪಾಯಕಾರಿ ಎಂಬುದನ್ನು ಕವಿ ಎಚ್ಚರಿಸುತ್ತಾನೆ. ಕೆಸರಿನಲ್ಲಿ ಮುಳ್ಳು ತುಳಿದಾಗ ಉಂಟಾಗುವ ನೋವಿನಂತೆ, ಇಂತಹ ದುಷ್ಟ ಗುಣಗಳು ವ್ಯಕ್ತಿಯ ಜೀವನದಲ್ಲಿ ತೊಂದರೆಗಳನ್ನು ಉಂಟುಮಾಡುತ್ತವೆ ಎಂಬ ಅರ್ಥವನ್ನು ನೀಡುತ್ತದೆ.

ಸರ್ವಜ್ಞನ ಪ್ರಕಾರ, ಉತ್ತಮ ವ್ಯಕ್ತಿಗಳ ಸಹವಾಸ ಮತ್ತು ಸತ್ಯನಿಷ್ಠೆಯ ಜೀವನವು ವ್ಯಕ್ತಿಯ ನೈತಿಕ ಬೆಳವಣಿಗೆಗೆ ಅತ್ಯಂತ ಅಗತ್ಯವಾಗಿದೆ.

ಮದ್ಯಪಾನ ಮತ್ತು ಇತರ ದುಶ್ಚಟಗಳು

ಸರ್ವಜ್ಞನು ತನ್ನ ಕಾಲದ ಸಮಾಜದಲ್ಲಿ ಮದ್ಯಪಾನ, ತಂಬಾಕು ಸೇವನೆ ಮತ್ತು ಇತರ ದುಶ್ಚಟಗಳಿದ್ದುದನ್ನು ತನ್ನ ತ್ರಿಪದಿಗಳ ಮೂಲಕ ಸೂಚಿಸಿದ್ದಾನೆ. ಮದ್ಯಪಾನ ಮಾಡುವ ವ್ಯಕ್ತಿಯು ತನ್ನ ವಿವೇಕವನ್ನು ಕಳೆದುಕೊಂಡು, ಕುಟುಂಬ ಮತ್ತು ಸಮಾಜದಲ್ಲಿ ಸಮಸ್ಯೆಗಳನ್ನು ಉಂಟುಮಾಡಬಹುದು ಎಂಬುದನ್ನು ಕವಿ ಎಚ್ಚರಿಸುತ್ತಾನೆ. ಮದ್ಯಪಾನವು ವ್ಯಕ್ತಿಯ ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಕುಟುಂಬ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ವಿಚಾರವನ್ನು ಆತನ ತ್ರಿಪದಿಗಳಲ್ಲಿ ಕಾಣಬಹುದು.

ಹೆಂಡವನ್ನು ಸುರಿಸುರಿದು ಕಂಡವರ ತಾಜರಿದು
ಬಂದು ನುಡಿಗಳನ್ನು ಸುರಿಯುತ್ತಲಿರುವವನ
ಕಂಡಿಹರೆ ಸರ್ವಜ್ಞ

ಈ ತ್ರಿಪದಿಯು ಮದ್ಯಪಾನದ ಪರಿಣಾಮವಾಗಿ ವ್ಯಕ್ತಿಯ ಮಾತು ಮತ್ತು ವರ್ತನೆಯಲ್ಲಿ ಉಂಟಾಗುವ ಬದಲಾವಣೆಗಳನ್ನು ಸೂಚಿಸುತ್ತದೆ.

ಸುರೆ ಸೇವಿಸುವವಂಗೆ ಸಿರಿವರ್ಗ ಪಿಡಿದವಂಗೆ
ದೊರೆಯಲ್ಲಿ ತೇಜಪಡೆದಂಗೆ ಶಿರವುಹುದು
ಸ್ಥಿರವಲ್ಲ ನೋಡ ಸರ್ವಜ್ಞ

ಮದ್ಯಪಾನ ಮಾಡುವ ವ್ಯಕ್ತಿಯ ಸ್ಥಿತಿ ಸ್ಥಿರವಾಗಿರುವುದಿಲ್ಲ ಎಂಬುದನ್ನು ಕವಿ ಈ ತ್ರಿಪದಿಯಲ್ಲಿ ಸೂಚಿಸುತ್ತಾನೆ. ದುಶ್ಚಟಗಳು ವ್ಯಕ್ತಿಯ ಗೌರವ ಮತ್ತು ಬದುಕಿನ ಸ್ಥಿರತೆಯನ್ನು ಹಾಳುಮಾಡಬಹುದು ಎಂಬ ಸಂದೇಶವನ್ನು ನೀಡುತ್ತಾನೆ.

ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ
ಬಿದ್ದು ಬರುವವನ ಸದ್ದಡಗಿ ಸಂತಾನಹರ

ವೆಂದು ಹೋಗುವುದು ಸರ್ವಜ್ಞ.

ಈ ತ್ರಿಪದಿಯ ಮೂಲಕ ಮದ್ಯಪಾನದ ದುಷ್ಪರಿಣಾಮಗಳು ವ್ಯಕ್ತಿಯ ಜೀವನ, ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ಬೀರುವ ಪರಿಣಾಮವನ್ನು ಸೂಚಿಸಲಾಗಿದೆ.

ಇದಲ್ಲದೆ, ಅಫೀಮು ಅಥವಾ ಇತರ ಮಾದಕ ಪದಾರ್ಥಗಳ ಸೇವನೆಯೂ ಅಂದಿನ ಸಮಾಜದಲ್ಲಿ ಇದ್ದಿರಬಹುದೆಂಬ ಸೂಚನೆ ಸರ್ವಜ್ಞನ ತ್ರಿಪದಿಗಳಲ್ಲಿ ಕಂಡುಬರುತ್ತದೆ. 'ಮದ್ದ ಮೆದ್ದವನು' ಎಂಬ ಪದಪ್ರಯೋಗವು ಮಾದಕ ಪದಾರ್ಥಗಳ ಸೇವನೆಯ ಕುರಿತು ಕವಿಯ ಗಮನವನ್ನು ಸೂಚಿಸುತ್ತದೆ. ಇಂತಹ ದುಶ್ಚಟಗಳು ವ್ಯಕ್ತಿಯ ಆರೋಗ್ಯ ಮತ್ತು ಸಾಮಾಜಿಕ ಜೀವನವನ್ನು ಹಾಳುಮಾಡುತ್ತವೆ ಎಂಬುದನ್ನು ಕವಿ ತನ್ನ ವಿಚಾರಗಳ ಮೂಲಕ ಎಚ್ಚರಿಸುತ್ತಾನೆ.

ಕೃಷಿ ಮತ್ತು ಆರ್ಥಿಕ ಜೀವನ

ಸರ್ವಜ್ಞನು ಜೀವಿಸಿದ್ದ ಕಾಲದಲ್ಲಿ ಕೃಷಿ ಚಟುವಟಿಕೆಗಳು ಪ್ರಮುಖ ಜೀವನಾಧಾರವಾಗಿದ್ದವು ಎಂಬುದಕ್ಕೆ ಆತನ ತ್ರಿಪದಿಗಳಲ್ಲಿ ಆಹಾರ ಪದಾರ್ಥಗಳು, ಕೃಷಿ ಮತ್ತು ಭೂಮಿಯ ಕುರಿತು ಉಲ್ಲೇಖಗಳು ಕಂಡುಬರುತ್ತವೆ. ಜೋಳ, ಕಾಳು, ಸೊಪ್ಪು, ಸೌತೆಕಾಯಿ, ನವಣೆ, ಅಕ್ಕಿ ಮತ್ತು ಗೋಧಿಯಂತಹ ಆಹಾರ ಪದಾರ್ಥಗಳನ್ನು ಆತ ಉಲ್ಲೇಖಿಸಿದ್ದಾನೆ. ಇವು ಅಂದಿನ ಕೃಷಿ ಪದ್ಧತಿ ಮತ್ತು ಆಹಾರ ಸಂಸ್ಕೃತಿಯ ಕುರಿತು ತಿಳಿದುಕೊಳ್ಳಲು ಸಹಾಯಕವಾಗುತ್ತವೆ.

ಅಡಿಕೆ, ವೀಳ್ಯದೆಲೆ, ಭತ್ತ ಮತ್ತು ಇತರ ಕೃಷಿ ಉತ್ಪನ್ನಗಳ ಕುರಿತು ಆತನ ತ್ರಿಪದಿಗಳಲ್ಲಿ ಕಂಡುಬರುವ ಸೂಚನೆಗಳು ಅಂದಿನ ಕೃಷಿ ಜೀವನದ ಸ್ವರೂಪವನ್ನು ತಿಳಿಸುತ್ತವೆ. ಕೃಷಿಯು ಸಮಾಜದ ಆರ್ಥಿಕ ವ್ಯವಸ್ಥೆಯ ಪ್ರಮುಖ ಆಧಾರವಾಗಿತ್ತು. ಮಾನವನ ಜೀವನದಲ್ಲಿ ದುಡಿಮೆ ಮತ್ತು ಕೃಷಿಯ ಮಹತ್ವವನ್ನು ಸರ್ವಜ್ಞನು ಅರಿತುಕೊಂಡಿದ್ದನು.

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ
ದಾಟವೇ ಕೆಡವು ಸರ್ವಜ್ಞ.

ಈ ತ್ರಿಪದಿಯ ಮೂಲಕ ಸರ್ವಜ್ಞನು ಕೃಷಿ ಮತ್ತು ದುಡಿಮೆಯ ಮಹತ್ವವನ್ನು ಸಾರುತ್ತಾನೆ. ಅನೇಕ ವಿದ್ಯೆಗಳಿಗಿಂತ ಕೃಷಿ ವಿದ್ಯೆಯು ಶ್ರೇಷ್ಠವಾದದ್ದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಕೃಷಿಯ ಮೂಲಕ ಆಹಾರ ಉತ್ಪಾದನೆ ಮತ್ತು ದೇಶದ ಆರ್ಥಿಕ ವ್ಯವಸ್ಥೆಯು ಬಲಗೊಳ್ಳುತ್ತದೆ. ಕೃಷಿ ಮತ್ತು ಶ್ರಮವಿಲ್ಲದೆ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ಸಂದೇಶವನ್ನು ಈ ತ್ರಿಪದಿ ನೀಡುತ್ತದೆ.

ಉಪಸಂಹಾರ

ಒಟ್ಟಾರೆಯಾಗಿ ಸರ್ವಜ್ಞನ ತ್ರಿಪದಿಗಳನ್ನು ಗಮನಿಸಿದಾಗ, ಅವುಗಳಲ್ಲಿ ಆತನ ಕಾಲದ ಸಮಾಜದ ವಿವಿಧ ಆಯಾಮಗಳು ಪ್ರತಿಬಿಂಬಿತವಾಗಿರುವುದು ಕಂಡುಬರುತ್ತದೆ. ಧಾರ್ಮಿಕ ಸಂಘರ್ಷಗಳು, ಜಾತಿ ವ್ಯವಸ್ಥೆ, ಸಾಮಾಜಿಕ ಅಸಮಾನತೆ, ಡಾಂಭಿಕತೆ, ದುಶ್ಚಟಗಳು ಮತ್ತು ಅನೈತಿಕ ಚಟುವಟಿಕೆಗಳ ಕುರಿತು ಆತ ವಿಮರ್ಶಾತ್ಮಕವಾಗಿ ಚಿಂತಿಸಿದ್ದಾನೆ. ಅದೇ ಸಂದರ್ಭದಲ್ಲಿ ದಾನಧರ್ಮ, ಸತ್ಯನಿಷ್ಠೆ, ಮಾನವೀಯತೆ, ಉತ್ತಮ ನಡತೆ, ಕೃಷಿ ಮತ್ತು ಶ್ರಮದ ಮಹತ್ವವನ್ನು ಸಾರಿದ್ದಾನೆ. ಸರ್ವಜ್ಞನು ತನ್ನ ತ್ರಿಪದಿಗಳ ಮೂಲಕ ಸಮಾಜದಲ್ಲಿನ ಲೋಪದೋಷಗಳನ್ನು ವಿಡಂಬನಾತ್ಮಕವಾಗಿ ಚಿತ್ರಿಸುವುದರ ಜೊತೆಗೆ, ಅವುಗಳನ್ನು ತಿದ್ದಿಕೊಳ್ಳಲು ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದಾನೆ. ಆತನ ಸಾಹಿತ್ಯವು ಸಮಾಜದ ಸಮಸ್ಯೆಗಳನ್ನು ಗುರುತಿಸುವುದಷ್ಟೇ ಅಲ್ಲದೆ, ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಮಾರ್ಗದರ್ಶನವನ್ನೂ ನೀಡುತ್ತದೆ.

ಸಮಾಜದಲ್ಲಿ ಒಳಿತು ಮತ್ತು ಕೆಡುಕುಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಕಂಡುಬರುತ್ತವೆ.

ಇವುಗಳ ಪರಿಣಾಮವಾಗಿ ಸಮಾಜವು ವಿವಿಧ ರೀತಿಯ ಲಾಭ ಮತ್ತು ನಷ್ಟಗಳನ್ನು ಎದುರಿಸುತ್ತದೆ. ಸರ್ವಜ್ಞನ ತ್ರಿಪದಿಗಳನ್ನು ಅಧ್ಯಯನ ಮಾಡುವುದರಿಂದ ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಅವಕಾಶ ದೊರೆಯುತ್ತದೆ. ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳು, ಅಸಮಾನತೆ ಮತ್ತು ದುಶ್ಚಟಗಳನ್ನು ಹೋಗಲಾಡಿಸಿ, ಶಾಂತಿ, ನೆಮ್ಮದಿ ಮತ್ತು ಸಹಬಾಳ್ವೆಯಿಂದ ಬದುಕುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿಯ ಮೂಲಕ ಉತ್ತಮ ಹಾಗೂ ಸಮಾನತೆಯ ಸಮಾಜವನ್ನು ನಿರ್ಮಿಸಬಹುದು ಎಂಬ ಆಶಯವನ್ನು ಸರ್ವಜ್ಞನ ಸಾಹಿತ್ಯವು ನಮಗೆ ನೀಡುತ್ತದೆ.

ಪರಾಮರ್ಶನ ಗ್ರಂಥಗಳು

- ಬಡಿಗೇರ, ವೀರೇಶ್. *ಸರ್ವಜ್ಞನ ಕುರಿತ ಅಧ್ಯಯನಗಳು.*
- ಬಸವರಾಜ, ಎಲ್. *ಸರ್ವಜ್ಞನ ವಚನಗಳು.*
- *ಗುರು ಪಥ* ಮಾಸಪತ್ರಿಕೆ.
- ದಿನಪತ್ರಿಕೆಗಳು.
- ಅಂತರ್ಜಾಲ ಸಂಪನ್ಮೂಲಗಳು.